(ಇಂದು ದಿನಾಂಕಃ **26-09-2024** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲು ಶ್ರೀ ಆರ್ ಎಂ ಆರ್ ವಕೀಲರಿಂದಃ**

ಸರ್ವೆ ನಂಃ 898/4 ಕ್ಷೇತ್ರ 4 ಎಕರೆ ಜಮೀನು ನನ್ನ ಗಂಡನಿಗೆ ಅವರ ಹಿರಿಯರಿಂದ ಬಂದ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಗಂಡ ದುಡಿದು ಖರೀದಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ಗಂಡನಿಗೆ 2 ಜನ ಸಹೋದರರು. ಸದರಿಯವರೆಂದರೆ ಚೆನ್ನಬಸಪ್ಪ, ಹನಮಪ್ಪ ಹಾಗೂ ಜಗದೀಶ. ಸದರಿಯವರಲ್ಲಿ ಜಗದೀಶ ರವರು ದತ್ತಕ ಹೋಗಿರುತ್ತಾರೆ ಎಂದರೆ ಸರಿ. ಸರ್ವೆ ನಂಃ 898/4 ಇದು ಪಾಲು ವಿಭಾಗದ ಪ್ರಕಾರ ನನ್ನ ಗಂಡನ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಸದರಿ ಪಾಲು ವಿಭಾಗ ದಿನಾಂಕಃ 20-12-2017 ರಂದು ನೊಂದಣಿಯಾಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿ ನನ್ನ ಗಂಡನ ಸ್ವಯಾಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಕಚೇರಿಯವರು ತಯಾರಿಸಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ ಛಾಪಾ ಕಾಗದವನ್ನು ನನ್ನ ಗಂಡ ತಂದಿರುತ್ತಾರೆ. ಸದರಿ ಕಾಗದವನ್ನು ನಿ ಪಿ 27 ನ್ನು ಬರೆಯುವುದಕ್ಕಿಂತ ಎಷ್ಟು ದಿನಗಳ ಮೊದಲು ಖರೀದಿಸಿರುತ್ತಾರೆ ಎಂದು ನನ್ನ ಗಂಡನಿಗೆ ಗೊತ್ತಿರುತ್ತದೆ. ಸದರಿ ದಾಖಲೆಯಲ್ಲಿ ಸದರಿ ಆಸ್ತಿ ನನ್ನ ಗಂಡನ ಸ್ವಯಾಜಿತ ಆಸ್ತಿ ಎಂದು ನಮೂದಿಸಲಾಗಿರುತ್ತದೆ. ಸದರಿ ದಾಖಲೆ ತಯಾರಿಸಿದಾಗ ಸಮಯ ಎಷ್ಟಾಗಿತ್ತು ಎಂದು ನನಗೆ ಗೊತ್ತಿಲ್ಲ. ಹೆಬ್ಬೆಟ್ಟಿನ ಗುರುತಿನ ಮುಂದೆ ಬರೆದ ಹಿಂಬರಹವನ್ನು ನನ್ನ ಗಂಡ ಬರೆದಿರುತ್ತಾರೆ. ಸದರಿ ದಾಖಲೆ ತಯಾರಿಸುವ ಮೊದಲು ನನ್ನ ಗಂಡ ಸದರಿ ವಿಷಯವನ್ನು ನನಗೆ ನಮ್ಮ ಮನೆಯಲ್ಲಿ 2-3 ತಿಂಗಳ ಮುಂಚೆ ತಿಳಿಸಿದ್ದರು. ಸದರಿ ದಾಖಲೆ ಬರೆಯುವ ವೇಳೆ ನಾನು, ನನ್ನ ಗಂಡ, ಅವರ ತಮ್ಮ, ಪಟ್ಟೆದಾರ ಹಾಗೂ ಇಬ್ಬರು ಸಾಕ್ಷಿದಾರರು ಹಾಜರಿದ್ದರು. ಸದರಿ ಪಟ್ಟೆದಾರ ಎನ್ನುವವರು ಅಣ್ಣಿಗೇರಿ ನಿವಾಸಿ. ಸದರಿಯವರನ್ನು ನನ್ನ ಗಂಡ ಕರೆದುಕೊಂಡು ಬಂದಿದ್ದರು. ಸದರಿ ದಾಖಲೆಯಲ್ಲಿ ಸದರಿ ಆಸ್ತಿಯನ್ನು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ದಾಖಲೆಗೆ ಪ್ರತಿವಾದಿಯರು ಸಹಿ ಮಾಡಿರುವುದಿಲ್ಲ. ಸದರಿಯವರ ಸಹಿ ಮಾಡಿಸಲು ನನ್ನ ಗಂಡನಿಗೆ ಯಾವುದೇ ತೊಂದರೆ ಇರಲಿಲ್ಲ.

2. ನಿ ಪಿ 27 ನ್ನು ಖೊಟ್ಟಿಯಾಗಿ ತಯಾರಿಸಲಾಗಿದೆ ಎಂದರೆ ಸರಿಯಲ್ಲ. ನಿ ಪಿ 27 ನ್ನು ಬರೆದ 5-6 ತಿಂಗಳ ನಂತರ ನನ್ನ ಗಂಡ ಮೃತಪಟ್ಟಿರುತ್ತಾರೆ. ಸದರಿಯವರು ಕ್ಯಾನ್ಸರ್ ನಿಂದ ಮೃತಪಟ್ಟಿರುತ್ತಾರೆ. ಸದರಿ ಆಸ್ತಿಗೆ ನಾನು ಸಂಪೂರ್ಣ ಮಾಲೀಕಳಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ 1 ರಿಂದ 4 ನೇ ಪ್ರತಿವಾದಿಯರಿಗೆ ಪಾಲು ಇರುತ್ತದೆ ಎಂದರೆ ಸರಿಯಲ್ಲ. ಸದರಿಯವರಿಗೆ ಪಾಲು ಕೊಡಬಾರದು ಎನ್ನುವ ಕಾರಣಕ್ಕೆ ನಿ ಪಿ 27 ನ್ನು ತಯಾರಿಸಲಾಗಿದೆ

ಎಂದರೆ ಸರಿಯಲ್ಲ. ನನ್ನ ಗಂಡ ಹಾಗೂ ಸಾಕ್ಷಿದಾರರಾದ ಜಗದೀಶ ರವರೊಂದಿಗೆ ಉತ್ತಮ ಬಾಂಧವ್ಯ ಇತ್ತು ಎಂದರೆ ಸರಿ.

**ಪಾಟೀ ಸವಾಲು ಪ್ರತಿವಾದಿ 5 ಮತ್ತು 6 ನೇಯವರ ಪರವಾಗಿ ಶ್ರೀ ಎಸ್ ಐ ಎ ವಕೀಲರಿಂದಃ**

ನನಗೆ 5 ಮತ್ತು 6 ನೇ ಪ್ರತಿವಾದಿಯರು ಮಕ್ಕಳಾಗಬೇಕು. 1 ನೇ ಪ್ರತಿವಾದಿಯ ಗಂಡ ಸಹ ನನ್ನ ಮಗ. ದಾವಾ ಆಸ್ತಿಗಳಲ್ಲಿ 5 ಮತ್ತು 6 ನೇ ಪ್ರತಿವಾದಿಯವರಿಗೂ ಸಹ ಪಾಲು ಇದೆ ಎಂದರೆ ಸರಿ. ನಿ ಪಿ 27 ನ್ನು ಮಾಡಿ ಕೊಡಲು ನನ್ನ ಗಂಡನಿಗೆ ಸಂಪೂರ್ಣ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ವೇ ನಂಃ 318 ಇದು ನನಗೆ ನನ್ನ ತಾಯಿಯಿಂದ ಬಂದಿದೆ ಎಂದರೆ ಸರಿ. ಸದರಿ ಆಸ್ತಿ ನನ್ನ ಮಕ್ಕಳಿಗೆ ಹೋಗಬೇಕೆಂದು ಅವರ ಇಚ್ಛೆ ಇತ್ತು ಎಂದರೆ ಸರಿ. ಕಾರಣ ಸದರಿ ಆಸ್ತಿಯಲ್ಲಿಯೂ 5 ಮತ್ತು 6 ನೇ ಪ್ರತಿವಾದಿಯವರಿಗೂ ಪಾಲು ಇದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ .**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**